ಅಡಳಿತ ಸುಧಾರಣಾ ಇಲಾಖೆಯನ್ನು ಜಂಟಿಯಾಗಿ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

ರಾಜ್ಯದಲ್ಲಿರುವ ರಸ್ತೆ ಹಾಗೂ ಸೇತುವೆ ಅಭಿವೃದಿಗೆ ನಬಾರ್ಡ್‌ನಿಂದ ಪಡೆದ ಮೊತ್ತ.

2848: (3921)

ಶ್ರೀ ಎಸ್.ಅಂಗಾರ (ಸುಳ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1997-98 ಹಾಗೂ 98-99 ನೇ ಸಾಲಿಗೆ ರಾಜ್ಯದಲ್ಲಿರುವ ರಸ್ತೆ ಹಾಗೂ ಸೇತುವೆ ಅಭಿವೃದ್ಧಿಗೆ ನಬಾರ್ಡ್‌ನಿಂದ ಪಡೆಯಲಾದ ಹಣದ ಮೊತ್ತವೆಷ್ಟು?

ಆ) ಈ ಹಣವನ್ನು ಸಹಾಯ ಧನವಾನ್ನಾಗಿ ಪಡೆಯಲಾಗಿದೆಯೋ ಅಥವಾ ಸಾಲವಾಗಿ ಪಡೆಯ ಲಾಗಿದೆಯೇ?

ಇ) ಈ ಹಣವನ್ನು ಒಟ್ಟು ಎಷ್ಟು ವಿಧಾಸಭಾ ಕ್ಷೇತ್ರಗಳಿಗೆ ಬಿಡುಗಡೆ ಮಾಡಲಾಗಿದೆ: ಯಾವ ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆ?

ಈ) ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಎಷ್ಟು ವಿಧಾನಸಭಾ ಕ್ಷೇತ್ರಗಳಿಗೆ ಈ ಹಣವನ್ನು ಮಂಜೂರು ಮಾಡಲಾಗಿದೆ. ಎಷ್ಟು ಹಣವನ್ನು ಇದುವರೆಗೂ ಬಿಡುಗಡೆ ಮಾಡಲಾಗಿದೆ? (ಕ್ಷೇತ್ರವಾರು ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಡಿ 1997-98ನೇ ಸಾಲಿನಲ್ಲಿ 138.82 ಕೋಟಿ ಹಾಗೂ 98-99ರಲ್ಲಿ ಈವರೆಗೆ 14.65 ಕೋಟಿ ರೂ.ಗಳ ಸಾಲ ಮಂಜೂರಾಗಿದೆ.

ಆ) ಈ ಹಣವನ್ನು ಸಾಲವಾಗಿ ಪಡೆಯಲಾಗಿದೆ.

ಇ) ನಬಾರ್ಡ್‌ನವರು ಮುಂಗಡ ಸಾಲ ನೀಡುವುದಿಲ್ಲ. ರಾಜ್ಯ ಸರ್ಕಾರ ಆಯ್ಕೆ ಮಾಡಿದ ಕಾಮಗಾರಿಗಳಿಗೆ ಮಂಜೂರಾತಿ ನೀಡುತ್ತಿದ್ದು ಮೊದಲಿಗೆ ರಾಜ್ಯ ಸರ್ಕಾರದ ಬೊಕ್ಕಸದಿಂದ ವೆಚ್ಚ ಮಾಡಿ ನಂತರ ನಬಾರ್ಡ್‌ನಿಂದ ಶೇ:90 ಮೊತ್ತಕ್ಕೆ ಮರು ಪಾವತಿ ಪಡೆಯ ಬೇಕಿರುತ್ತದೆ. ಹೀಗೆ ಮಂಜೂರಾದ ಕಾಮಗಾರಿಗಳು 192 ಕ್ಷೇತ್ರಗಳಲ್ಲಿ

ಹಬ್ಬಿವೆ. ಈ ಸಾಲ ಸಹಾಯವನ್ನು ಗ್ರಾಮೀಣ ಮೂಲಭೂತ ಅಭಿವೃದ್ಧಿ ಕಾಮಗಾರಿಗಳಿಗೆ ನೀಡಲಾಗಿದೆ.

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾಗಿರುವ ಕ್ಷೇತ್ರವಾರು ವಿವರ ಕೆಳಕಂಡಂತಿದೆ.

	ಕ್ಷೇತ್ರ	ಕಾಮಗಾರಿಗಳ ಸಂಖ್ಯೆ	ಮೊತ್ತ (ಲಕ್ಷ ರೂ.ಗಳಲ್ಲಿ)
1.	ಸೂಳ್ಯ	7	195.50
2.	ಪುತ್ತೂರು	4	72.89
3.	ವಿಟ್ಲ	5	152.73
4.	ಬೆಳ್ತಂಗಡಿ	5	154.43
5.	ಬಂಟ್ವಾಳ	3+ 1 (ಭಾಗಶಃ ರಸ್ತೆ)	135.50
6.	ಕಾಪು	1	91.95
7.	ಮೂಡಬಿದ್ರೆ	7	260.85
8.	ಕಾರ್ಕಳ	4	105.15
9.	ಬಹ್ಮಾವರ	6	288.30
10.	ಉಲ್ಲಾಳ	1+ 1 (ಭಾಗಶಃ ರಸ್ತೆ)	65.05
11.	ಕುಂದಾಪುರ	2	40.01
12.	ಬೈಂದೂರು	3	88.57
13.	ಉಡುಪಿ	1	16.00
14.	ಸೂರತ್ಕಲ್	2	30.60

ಹಣ ಬಿಡುಗಡೆ ಪ್ರಶ್ನೆ ಉದ್ಭವಿಸುವುದಿಲ್ಲ.